DIFFICULTIES FACED BY THE BARBERS AND THE DHOBIES DUE TO CHANGE OF DRESS AND HAIR STYLE

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).— ನಿನ್ನೆ ದಿವಸ ರೂಲ್ 340ರ ಪ್ರಕಾರ ಒಂದು ವಿಚಾರ ಪ್ರಸ್ತಾಪಿಸಲು ಪ್ರಯತ್ನ ಮಾಡಿದೆ. ಭಜಂತ್ರಿಗಳಿಗೆ ಆಗಿರುವ ತೊಂದರೆ ಗಮನಕ್ಕೆ ತರಬೇಕಾಗಿದೆ. ಅವರು ಕಳವಳವನ್ನು ವ್ಯಕ್ತಮಾಡಿದ್ದಾರೆ. ಕ್ಷೌರಿಕರು ಮತ್ತು ದೋಭಿಗಳು ಕಷ್ಟದಲ್ಲಿದ್ದಾರೆ.

MR. DEPUTY SPEAKER.— The hon. member is a Lawyer and he knows the rules and procedure. These things could have been raised long back after the Question Hour. We have already entered into the list of business. How Can I permit now ? If he was a new member it would have been alright in raising such things in the middle.

ಶ್ರೀ ವಾಟಾಳ್ ನಾಗರಾಜ್.— ಭಜಂತ್ರಿಗಳ ವಿಚಾರ ನಾನು ಹೇಳಲು ಪ್ರಾರಂಭಿಸಿದೆ, ಅವರು ಹೇಳಿದರು. ಸಮಾಜದಲ್ಲಿ ಸಾಮಾನ್ಯ ಜನರ ಪ್ರಶ್ನೆ ಇದು. ಅವರು ತಮ್ಮ ಕಸಬನ್ನೇ ಬಿಡಬೇಕಾಗಿ ಬಂದಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಸರಕಾರದವರೇ ಕ್ಷೌರದ ಅಂಗಡಿ ಇಡಲಿ ಎಂಬುದು ಬಹುಶಃ ಅವರ ಅಭಿಪ್ರಾಯವೇದು ಕಾಣುವುದು.

ಶ್ರೀ ವಾಟಾಳ್ ನಾಗರಾಜ್.— ಈ ಪ್ರಶ್ನೆ ಮುಖ್ಯವಾದುದು, ಸಚಿವರು ಇದಕ್ಕೆ ಉತ್ತರ ಕೊಡಬೇಕು. ಈಗ ಉಡುಪು ಬದಲಾವಣೆಯಾಗಿದೆ. ಸೀರೆ ಹೋಯ್ತು ಪಂಚೆ ಬಂತು, ಹುಡುಗ ಯಾರು, ಹುಡುಗಿ ಯಾರು ಎಂಬುದೇ ಗೊತ್ತಾಗುವುದಿಲ್ಲ. ಹೆಣ್ಣು ಹುಡುಗಿಯರು ಗಂಡಸರ ಡ್ರೆಸ್ ಹಾಕಂತ್ತಿದ್ದಾರೆ, ಪರಾಯಿ ಧರಿಸುವರು.

ಶ್ರೀಮತಿ ವಿನ್ನಿಫ್ರೆಡ್ ಫರ್ನಾಂಡಿಸ್.— ಅವರಿಗೇನು ಕಷ್ಟ ಇದರಿಂದ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.— ಪಾಯಿಂಟ್ ಆಫ್ ಆರ್ಡರ್. ಈ ಸಭೆಯ ಕಾರ್ಯಕಲಾಪ ವಿಧಿಗಳಿಗನುಗುಣವಾಗಿ ನಡೆಯಬೇಕು. ಸಾಮಾನ್ಯವಾಗಿ ಇಂಥ ಪ್ರಶ್ನೆಗಳನ್ನು ಪ್ರಶ್ನೋತ್ತರ ಕಾಲವಾದ ಮೇಲೆ ಅನುಮತಿ ಪಡೆದು ಸಭೆಯ ಗಮನಕ್ಕೆ ತರಬೇಕು. ಆದರೆ ಯಾವುದೋ ಎಷಯ ತೆಗೆದುಕೊಂಡಿರುವಾಗ ಆ ಕಾಲದಲ್ಲಿ ಈಗ ಇಂಥ ವಿಷಯ ತರುವುದು ಯುಕ್ತವಲ್ಲ ವಿಷಯ ಪ್ರಾಮುಖ್ಯವಾದುದು ಆಗಿರಬಹುದು. ಇಲ್ಲವೆಂದು ಹೇಳುವುದಿಲ್ಲ. ಆದರ ಮಹತ್ವ ಬಹಳವಿರಬಹುದು. ಆದರೆ ಅದನ್ನು ಯಾವ ಸಮಯದಲ್ಲಿ ಗಮನಕ್ಕೆ ತರಬೇಕೋ ಆಗ ತರಬೇಕೇ ವಿನಾ ಸದಾ ಕಾಲದಲ್ಲೂ ತರಬಾರದು. ಶ್ರೀ ವಾಟಾಳ್ ನಾಗರಾಜರವರಾಗಲೀ ಅಥವಾ ಬೇರೆ ಯಾವ ಸದಸ್ಯರೇ ಆಗಲಿ ನಿಯಮದಂತೆ ತರಬೇಕಾದ ಸಮಯದಲ್ಲಿ ತರುವುದು ಯೋಗ್ಯ. ಹೀಗೆ ವಿಧಿಗಳಿಗನುಗುಣವಾಗಿ ತರದೆ ಬೇಕಾದಾಗ ತರುವುದು ಕಾನೂನು ರೀತ್ಯ ವಿರೋಧವಾಗುವುದು ಎಂದು ನಾನು ಗಮನಕ್ಕೆ ತರುತ್ತೇನೆ.

ಶ್ರೀ ವಾಟಾಳ್ ನಾಗರಾಜ್.— ಸರಕಾರ ಇದರ ಬಗ್ಗೆ ಉತ್ತರ ಕೊಡಲು ಒಪ್ಪಿಕೊಂಡರೆ ನಾನು ಈ ವಿಷಯವನ್ನು ಒತ್ತಾಯಮಾಡುವುದಿಲ್ಲ.

MR. DEPUTY SPEAKER.— We know it is an important matter. It will come up after due consideration. The point is to do justice to them. It is a good thing. That is why I am telling ther it will come up after due consideration. Members must observe the rules and procedure. Now I will go to the next item of business. It is about the movement of Mysore Co-operative Societies (Amendment) Bill, 1972. Hon. Member Sri Krishnan may move it.